# 1

# ಮನನೊಂದ ಹೃದಯಕ್ಕೆ ಆದರಣೆ

## (ಯೋಹಾನ 14)

*"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿ ಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು" (ವಚನಗಳು 1-3).*

ಯೇಸು ತನ್ನ ಶಿಷ್ಯರನ್ನು ಬಿಟ್ಟುಹೋಗುವೆನೆಂದು ಮುಂತಿಳಿಸಿದ್ದನು. "ನಾನು ನನ್ನ ತಂದೆಯ ಬಳಿಗೆ ಹೋಗುವ ಸಮಯ ಬಂದದೇ" (14:12). ಈ ಸುದ್ಧಿಯಿಂದ ಆತನ ಶಿಷ್ಯರು ದಿಗ್ಭ್ರಮೆಗೊಂಡರು. ಅವರು ಆತನ ಧೈಹೀಕ ಸಾನಿದ್ಯದಿಂದ ಮಾತ್ರ ಧೈರ್ಯಗೊಂಡವರಾಗಿದ್ದರು. ಆತನು ಅವರೊಂದಿಗೆ ಇರುವಾಗ ಅವರು ಭರವಸವುಳ್ಳವರಾಗಿದ್ದರು, ಈಗ ಪೇತ್ರನು ಮೌನವನ್ನು ಮುರಿದು, ಸ್ವಾಮೀ ಎಲ್ಲಿಗೆ ಹೋಗುತ್ತಿ? ಎನ್ನಲು ಯೇಸು ಅವನಿಗೆ "ನಾನು ಹೋಗುವಲ್ಲಿಗೆ ನೀವು ಬರಲಾರಿರಿ, ಆದರೆ ನಂತರ ಬರುವಿರಿ" (13:36). ಎಂದಾಗ, ಪೇತ್ರನು ಈ ಮಾತುಗಳನ್ನು ಸಹಿಸಲಾರದೆ, ಸ್ವಾಮಿ ನಾನು ಯಾಕೆ ಈಗ ನಿನ್ನ ಹಿಂದೆ ಬರಬಾರದು? ನಿನಗಾಗಿ ನನ್ನ ಪ್ರಾಣವನ್ನಾದರೂ ಕೊಟ್ಟೇನು ಎಂದು ಹೇಳಲು ಯೇಸು, "ನೀನು ನನ್ನ ವಿಷಯದಲ್ಲಿ ಅವನನ್ನು ಅರಿಯನೆಂದು ಈ ರಾತ್ರಿ ಹೇಳುತ್ತಿ ಅಂದನು."

ಈ ಮಾತುಗಳಿಂದ ಅಪೊಸ್ತಲರು ಭ್ರಾಂತರಾದರು. ಯೇಸುವಿನ ಈ ತರ್ಕದಲ್ಲಿ ಯೂದ ಮತ್ತು ಪೇತ್ರರು ಪ್ರಮುಖರಾಗಿದ್ದರು (ನೋಡಿರಿ 13:21-38). ಈಗ ಅಪೊಸ್ತಲರೆಲ್ಲರೂ ಗೊಂದಲಕ್ಕೊಳಗಾಗಿ ಭಯಭ್ರಾಂತರಾದರು ಮತ್ತು ಅಧೈರ್ಯಗೊಂಡರು. ಯೇಸು ಅವರನ್ನು ಬಿಟ್ಟು ತಂದೆಯ ಬಳಿಗೆ ಹೋಗುವನು, ಅವರಲ್ಲಿ ಒಬ್ಬನು ಯೇಸುವನ್ನು ಹಿಡುಕೊಡುವನು ಮತ್ತು ಪೇತ್ರನು ಆತನನ್ನು ಬೊಂಕುವನು ಎಂದು ತಿಳಿದು ಗಾಬರಿಗೊಂಡವರಾದರು.

ರಾತ್ರಿಯ ಗಾಡಾಂಧಕಾರವು ಅವರ ಮನಸ್ಸನ್ನು ಕವಿಯಿತು. ಈಗ ಅವರಿಗೆ ಭರವಸೆಯ ಬೆಳಕಿನ ಅಗತ್ಯವಿತ್ತು. ಅವರ ಕಳವಳವುಳ್ಳ ಹೃದಯಗಳನ್ನು ಯೇಸು ಹೇಗೆ ಸಂತೈಸಿದನು? ಹೌದು ಯೇಸು ಅವರಿಗೆ ತೋರಿದ ಪ್ರತಿ ಕ್ರಿಯೆಯನ್ನೇ ನಮಗೂ ತೋರುವನು.

### ಅಪ್ಪಿಕೊಳ್ಳಬೇಕಾದ ಒಂದು ವಿಶ್ವಾಸ

*ಅವರು ಒಂದು ವಿಶ್ವಾಸವನ್ನು ಹಿಡಿದುಕೊಳ್ಳುವಂತೆ ಆತನು ಮಾಡಿದನು.* ದೇವರಲ್ಲಿಯೂ ಹಾಗೂ ಆತನಲ್ಲಿಯೂ ನಂಬಿಕೆಯಿಡುವಂತೆ ತಿಳಿಸಿದನು. ಆತನು ಅವರಿಗೆ ಎರಡು ವಿಧವಾದ ಆಯ್ಕೆಯನ್ನು ನೀಡಿದನು: *"ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ"* (14:1; ಒತ್ತಿ ಹೇಳಿದ್ದು ನನ್ನದು). ಇದು ಸಂದೇಹದ ಸಮಯವಾಗಿರಲಿಲ್ಲ ಭರವಸೆಯ ಸಮಯವಾಗಿತ್ತು, ಇದನ್ನು ಅವರು ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲದಿದ್ದರೂ; ತಂದೆಯಾರು ಯೇಸು ಯಾರು ಎಂದು ಅರಿತವರಾದ ಅವರು, ನಂಬಿಕೆಯಿಡಲು ಸಾಧ್ಯವಾಯಿತು. ಅವರು ಯೇಸುವಿನೊಂದಿಗೆ ಇದ್ದ ದಿನಗಳನ್ನು ನೆನಪಿಸುವಾಗ, ಅವರು ಎಂದಿಗೂ ಅಧೈರ್ಯಗೊಂಡಿರಲಿಲ್ಲ. ಅವರಿಗೆ

ಉಂಟಾಗಿದ್ದ ವಾಗ್ದಾನಗಳು ನೆರವೇರಿದ್ದವು. ಅವರ ಹಿಂದಿನ ಜೀವಿತದಲ್ಲಿ ದೇವರು ಮತ್ತು ತಂದೆ ಅವರನ್ನು ಮಾರ್ಗದರ್ಶನ ಮಾಡಿದಂತೆಯೇ, ಮುಂದಿನ ಅನಿಶ್ಚಿತವಾದ ಭವಿಷ್ಯದಲ್ಲಿ ದೇವರು ನಡಿಸುವನೆಂದು ತಿಳಿದಿದ್ದರು.

ಕಾರ್ಗತ್ತಲ ರಾತ್ರಿಗಳು ನಮ್ಮನ್ನು ಸುತ್ತುವರೆಯುವಾಗ - ಉತ್ತರವಿಲ್ಲದ ಭವಿಷ್ಯವು ಮಂಕಾಗಿರುವಾಗ ಅವರು ದುಃಖಿತರಾಗಿದ್ದರು, ನಂಬಿಕೆಯಲ್ಲಿ ನಾವುಗಳು ಮುಂದುವರೆಯ ಬೇಕು. ಗೊಂಡಾರಣ್ಯದಲ್ಲಿ ತೊಡಕುಗಳು ಉಂಟಾಗುವಾಗ; ನಾವು ಯೇಸುವನ್ನು ಹಾಗೂ ಯೇಸು ನಮ್ಮನ್ನು ಹಿಡಿದುಕೊಳ್ಳುವನು.

## ಭವಿಷ್ಯತ್ತಿನ ಒಂದು ಪ್ರಕಟನೆ

ಯೇಸು ಅವರಿಗೆ ಭವಿಷ್ಯತ್ತಿನ ಪ್ರಕಟಣೆಯನ್ನು ತೋರಿ, ಮುಂಬರುವ ಪರಲೋಕದ ವೈಭವವನ್ನು ಎದುರು ನೋಡಬೇಕು ಅಂದನು. ವಿಶ್ವಾಸಿಗಾಗಿ ಮುಂದಿಟ್ಟಿರುವ ಸುಂದರ ವಾದ ಭವಿಷ್ಯವನ್ನು ಯೇಸು ಅವರಿಗೆ ತೋರಿದನು. "ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳಿವೆ. ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧ ಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ, ನನ್ನ ಬಳಿಗೆ ಸೇರಿಕೊಳ್ಳುವೆನು" (14:2, 3ಎ). ಯೇಸು ನಮಗಾಗಿ ಅನೇಕ ಬಿಡಾರಗಳನ್ನು ಸಿದ್ಧಮಾಡಲು ತಂದೆಯ ಮನೆಗೆ ಹಿಂತಿರುಗುತ್ತಿದ್ದನು. ಅಲ್ಲಿ ಎಲ್ಲರಿಗೂ ಸಾಕಾಗುವಷ್ಟು ಬಿಡಾರಗಳಿದ್ದವು. ಈ ಸಮಯದಲ್ಲಿ ಅಪೊಸ್ತಲರು ಆತನನ್ನು ಹಿಂಬಾಲಿಸುವಾಗ, ಅವರಿಗಾಗಿ ಭವಿಷ್ಯತ್ತಿನಲ್ಲಿ ಅನೇಕ ಬಿಡಾರಗಳು ಸಿದ್ಧಗೊಳ್ಳುತ್ತಿದ್ದವು.

ಕಷ್ಟಾನುಭವದ ಸಮಯದಲ್ಲಿ, ಈ ಲೋಕವು ನಮಗೆ ನಿತ್ಯವಾದ ನಿವಾಸ ಎಂದು ತಿಳಿಯಬಾರದು. ನಾವು ಪ್ರವಾಸಿಗಳಾಗಿದ್ದು, ಅಲ್ಪ ಕಾಲ ಮಾತ್ರ ನಾವುಗಳು ಇಲ್ಲಿರುವೆವು, ಹಾಗೂ ನಾವುಗಳು ತಾತ್ಕಾಲಿಕವಾದ ಕೆಲಸಗಾರರು ಎಂದು ಅರಿಯಬೇಕು. ಪರಲೋಕ ಬಾಧ್ಯತೆಯನ್ನು ಹೊಂದಿದ ಲೋಕದವರಾಗಿರದೆ, ಈ ಲೋಕದಿಂದ ಹಾದು, ದೇವರ ಸಂಸ್ಥಾನದವರಾಗಿದ್ದೇವೆ. ಪರಲೋಕ ಸಂಸ್ಥಾನದ ದರ್ಶನವನ್ನು ಹೊಂದದೆ ಇದ್ದರೆ, ಈ ಲೋಕದಲ್ಲಿನ ಸಂಕಟಗಳನ್ನು ಅನುಭವಿಸುವದು ಕಷ್ಟಕರವಾಗುತ್ತದೆ.

## ಎದುರು ನೋಡಬೇಕಾದ ಒಂದು ಅನ್ಯೋನ್ಯತೆ

*ಎದುರು ನೋಡಬಹುದಾದ ಅನ್ಯೋನ್ಯತೆಯನ್ನು ಯೇಸು ನೀಡಿರುವನು.* ಮುಂಬರಲಿರುವ ಐಕ್ಯತೆಯಲ್ಲಿ ಆನಂದಿಸಿ. ಪ್ರತ್ಯೇಕತೆಯು ನಿತ್ಯವಾದದ್ದಲ್ಲ ಎಂದು ಆತನು ನೆನಪಿಸಿದನು. ಇದು ಕೇವಲ ತಾತ್ಕಾಲಿಕವಾದದ್ದು ಆತನು ಬಂದಂಥ ಸ್ಥಳಕ್ಕೆ ಇವರನ್ನು ಸೇರಿ ಸುವನು, ಮತ್ತು ಆತನಿರುವಲ್ಲಿಯೇ ಅವರು ತಂಗುವವರಾಗಿದ್ದರು.

ಅದರಲ್ಲಿರುವ ಅನ್ಯೋನ್ಯತೆಯನ್ನು ನೆನಪಿಸುವಾಗ, ಪರಲೋಕದ ಭರವಸವು ತೇಜೋಮಯವಾಗುತ್ತದೆ. ನಾವು ಕೇವಲ ಒಂದು ಸ್ಥಳಕ್ಕೆ ಹೋಗದೆ, ಒಂದು ಅನ್ಯೋ ನ್ಯತೆಗೆ ಸೇರುವವರಾಗಿದ್ದೇವೆ. ಐಕ್ಯತೆಯು ಸ್ಥಳವನ್ನು ಅವಲಂಭಿಸದೆ. ಅಲ್ಲಿರುವ ವ್ಯಕ್ತಿಯ ಸಾನಿಧ್ಯವನ್ನು ಅವಲಂಭಿಸಿರುತ್ತದೆ. ನಮ್ಮ ಮನಸ್ಸಿಗೆ ಹೊಳೆಯದ ಸೌಂದರ್ಯದವು ಪರಲೋಕದಲ್ಲಿದೆ. ಅಲ್ಲಿರುವ ಅನ್ಯೋನ್ಯತೆಯು ದ್ವಿಗುಣವಾದದ್ದು. ಯೋಹಾನನು ಇದರ ಕುರಿತು,

> ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾ ಶಬ್ದವು ನನಗೆ ಕೇಳಿಸಿತು. ಅದು - ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ; ಆತನು ಅವರೊಡನೆ ವಾಸ ಮಾಡುವನು, ಅವರು ಆತನಿಗೆ ಪ್ರಜೆಗಳಾಗಿರುವರು; ದೇವರು ತಾನೇ ಅವರ ಸಂಗಡ ಇರುವನು, ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು (ಪ್ರಕಟನೆ 21:3, 4).

ಕರ್ತನು ತಾನೇ ನಮ್ಮ ಕಣ್ಣೀರನ್ನು ಒರೆಸುವನು ಎಂಬುದನ್ನು ಊಹಿಸಬಹುದೇ?

## ಮುಕ್ತಾಯ

ದಿನಗಳು ಕತ್ತಲಾಗಿ, ಮನಗುಂದಿದವರಾಗುವಾಗ ಆತ್ಮದ ಧೈರ್ಯಕ್ಕಾಗಿ ಎಲ್ಲಿಗೆ ಹೋಗೋಣ? ನಾವುಗಳು ಯೇಸುವನ್ನು ಹಿಂಬಾಲಿಸುವಂತೆ, "ನಿಮ್ಮ ಹೃದಯಗಳು ಕಳವಳ ಪಡದೇ ಇರಲಿ" ನಾವು ಆತನ ನಂಬಿಗಸ್ತಿಕೆಯಲ್ಲಿ ವಿಶ್ವಾಸವುಳ್ಳವರಾಗಿ, ರಕ್ಷಿಸ್ಪಟ್ಟಿರುವವರಿಗಾಗಿ, ಮುಂದಿಟ್ಟಿರುವ ಸೌಭಾಗ್ಯವನ್ನು ಬಯಸಿ, ಮುಂಬರುವ ಅನ್ಯೋನ್ಯತೆಯಲ್ಲಿ ಉಲ್ಲಾಸಪಡೋಣ.

ಯೆರೆಮೀಯನು ಕೇಳಿದಂತೆ, ಗಿಲ್ಯಾದಿನಲ್ಲಿ ಔಷಧವಿಲ್ಲವೋ? ಅಲ್ಲಿ ವೈದ್ಯನು ಸಿಕ್ಕನೋ? ನನ್ನ ಪ್ರಜೆಯೆಂಬಾಕೆಗೆ ಏಕೆ ಗುಣವಾಗಲಿಲ್ಲ? (ಯೆರೆಮೀಯ 8:22). ಅವನ ಮಾತುಗಳಲ್ಲಿ ಕೆಲವನ್ನು ಬದಲಾಯಿಸಿ, ಹೃದಯದಲ್ಲಿ ಕಳವಳ ಹೊಂದಿರುವವರಿಗಾಗಿ ಔಷಧಿವಿಲ್ಲವೋ? ಗಾಯಗೊಂಡ ಹೃದಯಗಳನ್ನು ಸ್ವಸ್ಥ ಮಾಡಬಲ್ಲ ವೈದ್ಯನಿಲ್ಲವೋ? ಅಧೈರ್ಯಗೊಳ್ಳದಂತೆ, ಕಳವಳಗೊಳ್ಳದಂತೆ, ದೇವರು ತನ್ನ ಜನರನ್ನು ಕಾಪಾಡುವನೇ? ಈ ಪ್ರಶ್ನೆಗೆ ಉತ್ತರವು ತಿಳಿದದೆ, "ಯೇಸು" ಎಂಬ ಒಂದೇ ಪದದ ಉತ್ತರ. ಆತನು ತಾನೇ ನಮಗೆ ಔಷದ, ಆತನು ವಿಶೇಷವಾದ ವೈದ್ಯನಾಗಿರುವನು. ಆತನು ನಮಗೆ ಅಗತ್ಯವಿರುವ ನಿರೀಕ್ಷೆ ಚೇತನ ಹಾಗೂ ಒಬ್ಬ ಪ್ರವಾಸಿಗೆ ಅಗತ್ಯವಿರುವ ಧೈರ್ಯವನ್ನು ನೀಡುವನು. ಜಯ ಹೊಂದುವ ನಂಬಿಕೆಯನ್ನು ನಾವುಗಳು ಹೊಂದಿದ್ದೇವೆ. ಆತನಲ್ಲಿ ಸವಿಯಾದ ಅನ್ಯೋನ್ಯತೆಯಿದೆ: ನಮಗೆ ಪರಲೋಕದ ಸಂಗಡ ಇವೆಲ್ಲವುಗಳು ದೊರೆಯುತ್ತದೆ. ಇವುಗಳಿಂದ ನಾವುಗಳು ಸಂರಕ್ಷಿಸಲ್ಪಟ್ಟಿದ್ದೇವೆ.

*"ಮಾರ್ಗವಿಲ್ಲದಿರುವಲ್ಲಿ, ಹೋಗುವದೆಲ್ಲಿಗೆ ಸತ್ಯವಿಲ್ಲದೆ, ಅದನ್ನು ಅರಿಯುವದು ಹೇಗೆ? ಜೀವ ಇಲ್ಲದಿದ್ದರೆ, ಜೀವಿಸುವದು ಹೇಗೆ? ನಾನೇ ಮಾರ್ಗವು ಅದರಲ್ಲಿ ನೀವು ನಡೆಯಬೇಕು; ಆತನೇ ಸತ್ಯವು ಅದರಲ್ಲಿ ಭರವಸವಿಡಿ. ಆ ಜೀವದಲ್ಲಿ ನಿರೀಕ್ಷೆಯಿಡಿ."*

*"ನಾನು ಗೌರವಕ್ಕೆ ಅನರ್ಹನಲ್ಲ, ನಾನು ಬಿದ್ದು ಹೋಗುವ ಸತ್ಯವಲ್ಲ, ನಾನು ನಿರಂತರವಾದ ಜೀವ.*

*"ನಾನೇ ನೇರವಾದ ಮಾರ್ಗ, ಅಗಮ್ಯ ಸತ್ಯ, ಧನ್ಯ, ಸೃಷ್ಟಿಕರ್ತನು.*

*"ನೀವು ನನ್ನ ಮಾರ್ಗದಲ್ಲಿ ನೆಲೆಗೊಳ್ಳಿರಿ, ನೀವು ಸತ್ಯವನ್ನು ಅರಿಯುವಿರಿ, ಆ ಸತ್ಯವು ನಿಮಗೆ ಬಿಡುಗಡೆಮಾಡುವದು, ನೀನು ನಿತ್ಯ ಜೀವವನ್ನು ಹೊಂದುವಿರಿ."*[1]

---

ಟಿಪ್ಪಣಿ

[1]Thomas à Kempis, *Of the Imitation of Christ* (New Canaan, Conn.: Keats Publishing, 1982), 237-38.